ನಿರ್ದೇಶಕರ ಕಾರ್ಯಾಲಯ

ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ

1ನೇ ಅಡ್ಡ ರಸ್ತೆ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು-560023

Tele No : 080 23405209

E-mail : directorsihfw.bg@gmail.com

ಸಂ:ರಾಆಸಂ/ಎಲ್.ಹೆಚ್.ವಿ.ಟಿ.ಸಿ./34/2023-24 ದಿನಾಂಕ: 26/03/2024

# ಸುತ್ತೋಲೆ

ವಿಷಯ: ಸೇವಾನಿರತ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರನ್ನು 6 ತಿಂಗಳ ಹಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿಗಾಗಿ ಆಹ್ವಾನಿಸಿದ ಅರ್ಜಿಗಳ ವಿವರ ಮತ್ತು ಅಭ್ಯರ್ಥಿಗಳಿಂದ ಆಕ್ಷೇಪಣೆಗಳನ್ನು ಸಲ್ಲಿಸುವ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2023-24ನೇ ಸಾಲಿನಲ್ಲಿ ಪ್ರಾರಂಭವಾಗಲಿರುವ 6 ತಿಂಗಳ ಹಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿಗೆ ಸೇವಾನಿರತ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅನುಬಂಧ-1 ರ ಪ್ರಕಾರ ಆಯ್ಕೆ ಮಾಡಲಾಗುವ ಸೀಟುಗಳ ವಿವರ ಹಾಗೂ ಅನುಬಂಧ-2 ರಲ್ಲಿ ಒಟ್ಟು ಅರ್ಜಿಗಳ ವಿವರ. ಅರ್ಜಿಗಳಲ್ಲಿ ಕಂಡು ಬಂದ ನ್ಯೂನತೆಗಳನ್ನು ಆ ಅಭ್ಯರ್ಥಿಗಳ ಷರಾದಲ್ಲಿ ನಮೂದಿಸಲಾಗಿದೆ. ಈ ನ್ಯೂನತೆಗಳನ್ನು ಅತೀ ಶೀರ್ಘವಾಗಿ ಸರಿಪಡಿಸಿಕೊಳ್ಳುವುದು. ಯಾವುದಾದರೂ ಆಕ್ಷೇಪಣೆಗಳಿದ್ದರೆ ಖುದ್ದಾಗಿ ಬಂದು ಈ ಸಂಸ್ಥೆಗೆ ದಿನಾಂಕ: 22.03.2024 ರ ಸಂಜೆ: 5.30ರೊಳಗೆ ಸೂಕ್ತ ದಾಖಲಾತಿಗಳೊಂದಿಗೆ ಸಲ್ಲಿಸಲು ಕಡೆಯ ದಿನಾಂಕವಾಗಿತ್ತು. ಅಭ್ಯರ್ಥಿಗಳು ಸೂಕ್ತ ದಾಖಲಾತಿಗಳನ್ನು ಸಲ್ಲಿಸುವಲ್ಲಿ ವಿಫಲವಾಗಿದ್ದು, ಕಾಲಾವಕಾಶ ಕೇಳಿರುವುದರಿಂದ, ಅವರ ಬೇಡಿಕೆಯಂತೆ ಆಕ್ಷೇಪಣೆಗಳನ್ನು ಸಲ್ಲಿಸಲು (ಖುದ್ದಾಗಿ ಈ ಸಂಸ್ಥೆಗೆ ಹಾಜರಾಗಿ ಸಲ್ಲಿಸಲು) ದಿನಾಂಕ: 04.04.2024 ರ ಸಂಜೆ: 5.30 ರವರೆಗೆ ವಿಸ್ತರಿಸಲಾಗಿದೆ. ದಿನಾಂಕ: 04.04.2024 ರ ಸಂಜೆ: 5.30 ರ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಹಲವು ಅಭ್ಯರ್ಥಿಗಳು ಒಂದೇ ದಿನಾಂಕದಂದು ಸೇವೆಗೆ ಸೇರ್ಪಡೆಯಾಗಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿಯ ಅಂಕಪಟ್ಟಿ / ಫಲಿತಾಂಶ ಪಟ್ಟಿಯನ್ನು ತರಬೇತಿ ಪೂರೈಸಿದ ಕಿ.ಮ.ಆ.ಸ.ತರಬೇತಿಯ ಪ್ರಭಾರ ಪ್ರಾಂಶುಪಾಲರ ಸಹಿ ಮತ್ತು ಮೊಹರು ಹಾಗೂ ಜಿಲ್ಲಾ ತರಬೇತಿ ಕೇಂದ್ರದ ಪ್ರಾಂಶುಪಾಲರ ಸಹಿ ಮತ್ತು ಮೊಹರಿನೊಂದಿಗೆ ಷರಾದಲ್ಲಿ ತಿಳಿಸಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ಈ ಸಂಸ್ಥೆಗೆ ಕಡೆಯ ದಿನಾಂಕದೊಳಗೆ ಸಲ್ಲಿಸಬೇಕು.

ಈ ಸಂಸ್ಥೆಗೆ ಸಲ್ಲಿಸಲಾದ ಎಲ್ಲಾ ಅರ್ಜಿಗಳ ವಿವರ ಮತ್ತು ಅರ್ಹರಿರುವ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿ ಮತ್ತು ಹೆಚ್ಚುವರಿ ಪಟ್ಟಿಯನ್ನು ಈ ಪತ್ರದೊಂದಿಗೆ ಬಿಡುಗಡೆ ಮಾಡಲಾಗಿದೆ. ಈ ವೆಬ್ ಸೈಟ್‌ನಲ್ಲಿ https://hfwcom.karnataka.gov.in ಸಹ ಬಿಡುಗಡೆ ಮಾಡಲಾಗಿದೆ.

ಇದು ಕೌನ್ಸಿಲಿಂಗ್ ಆಗಿರುವುದಿಲ್ಲ. ಕೌನ್ಸಿಲಿಂಗ್ ದಿನವನ್ನು ಮುಂಬರುವ ದಿನಗಳಲ್ಲಿ ಪ್ರಕಟಿಸಲಾಗುವುದು. ಆ ದಿನ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಹಾಜರಾಗತಕ್ಕದ್ದು. ಆಕ್ಷೇಪಣೆಗಳನ್ನು ಗಮನದಲ್ಲಿಟ್ಟುಕೊಂಡು ಅಂತಿಮ ಪಟ್ಟಿಯನ್ನು ತಯಾರಿಸಲು ಆಕ್ಷೇಪಣೆಗಾಗಿ ಒತ್ತು ನೀಡಲಾಗಿದೆ.

26/3/24

ನಿರ್ದೇಶಕರು,
ರಾಜ್ಯ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಸಂಸ್ಥೆ, ಬೆಂಗಳೂರು.